ಓ ಎಸ್ ನಂ.1645/2018 ಪಿ.ಡಬ್ಲ್ಯೂ-1

<u>ಸಾಕ್ಷಿಯನ್ನು ದಿನಾಂಕ: 02.08.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ.ಪಿ.ಸಿ., ಪ್ರತಿವಾದಿ ಪರ ವಕೀಲರಿಂದಃ</u>

3. ನಾನು ಪ್ರತಿವಾದಿಗೆ ಪೂರ್ತಿ ಹಣ ಸಂದಾಯ ಮಾಡಿದ ನಂತರ ಕ್ರಯದ ಕರಾರನ್ನು ರದ್ದು ಮಾಡಲು ಯಾವುದೇ ನೋಟಿಸನ್ನು ನೀಡಿಲ್ಲ. ನೋಟಿಸನ್ನು ನೀಡಿಲು ತೊಂದರೆ ಇರಲಿಲ್ಲ, ಆದರೆ ಅದರ ಬಗ್ಗೆ ನನಗೆ ತಿಳಿದಿರಲಿಲ್ಲ. ಈ ದಾವೆಯಲ್ಲಿ ಕೇಳಿರುವ ಪರಿಹಾರನ್ನು ನಾನು ಅಸಲು ದಾವಾ 782/2018 ರಲ್ಲಿ ಕೇಳಬಹುದಿತ್ತು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಸದರಿ ದಾವೆಯಲ್ಲಿ ನನ್ನನ್ನು ಪ್ರತಿನಿಧಿಸಿದ ವಕೀಲರು ಈ ದಾವೆಯಲ್ಲಿ ಪ್ರತಿನಿಧಿಸುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯು ನನ್ನ ವಿರುದ್ಧ ಕ್ರಯ ಪತ್ರವನ್ನು ಮಾಡಿಕೊಡುವಂತೆ ದಾವೆಯನ್ನು ಹೂಡಿರುವ ಕಾರಣ ಅವರ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾನು ಯಾವುದೇ ದೂರನ್ನು ನೀಡದಿದ್ದರೂ, ಪ್ರತಿವಾದಿಯು ನನಗೆ ಯಾವುದೇ ತೊಂದರೆಯನ್ನು ನೀಡದಿದ್ದರೂ ಅವರ ವಿರುದ್ಧ ಸುಳ್ಳು ದಾವೆಯನ್ನು ಹೂಡಿ ನನ್ನ ವಾದ ಪತ್ರದಲ್ಲಿ ಅವರ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ ಎಂದು ಸುಳ್ಳು ಮಾಹಿತಿ ನೀಡಿದ್ದೇನೆ

ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾನು ಕ್ರಯ ಪತ್ರವನ್ನು ಮಾಡಿಕೊಡಬೇಕಾಗುತ್ತದೆ ಎಂಬ ಕಾರಣದಿಂದ, ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಯದ ಕರಾರನ್ನು 6,70,000/- ಮಾಡಿಕೊಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸಾ.ಸ.ಇ.ಒ.**

**ಸಹಿ/-**
**13 ನೇ ಅಪರ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,**
**ಮೈಸೂರು.**